## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಹುಣಸೂರು.

## ಸಿ.ಸಿ. ಸಂಖ್ಯೆ: 620/14

**ಸಾಕ್ಷಿಯನ್ನು ದಿಃ 20.12.2023 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | |
|---|---|---|
| ಹೆಸರು | ಥಾಮಾಸ್ | ಸಿ.ಡಬ್ಲ್ಯೂಃ **40** ಪಿ.ಡಬ್ಲ್ಯೂಃ **22** |
| ತಂದೆಯ ಹೆಸರು | ಲೇಟ್ ಜಾಕೋಬ್ | |
| ವಯಸ್ಸು | **69** ವರ್ಷ | |
| ಕೆಲಸ | ನಿವೃತ್ತ ಪಿಎಸ್ ಐ | |
| ವಾಸಸ್ಥಳ | ಚಾಮರಾಜನಗರ | |

ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

1. ನಾನು ಜೂನ್ 2010 ರಿಂದ ಜುಲೈ-2013 ರವರೆಗೆ ನಾನು ಹುಣಸೂರು ಪಟ್ಟಣ ಠಾಣೆಯಲ್ಲಿ ಪಿಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 11.07.2012 ರಂದು ಚಾಸಾ-1 ರವರು ನೀಡಿದ ಬೆರಳಚ್ಚು ಮಾಡಿದ ದೂರನ್ನು ಸ್ವಿಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 150/12 ಕಲಂ 406, 408, 409, 468, 471, 420 ಐ.ಪಿ.ಸಿ ರೀತ್ಯಾ ಪ್ರಕರಣ ದಾಖಲಿಸಿ ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯದ ಹಾಗೂ ನನ್ನ ಮೇಲಾಧಿಕಾರಿಗಳಿಗೆ ರವಾನಿಸಿರುತ್ತೇನೆ.

2. ದೂರು ನಿಪಿ.1 ರಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.1 (ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ.116 ಎಂದು ಸಾಕ್ಷಿಯ ಸಹಿಯನ್ನು ನಿಪಿ.116(ಎ) ಎಂದು ಗುರುತಿಸಲಾಯಿತು.

3. ಅದೇ ದಿನ ಘಟನಾ ಸ್ಥಳವಾದ ಕರ್ನಾಟಕ ಬ್ಯಾಂಕ್ ಗೆ ಭೇಟಿ ನೀಡಿ ಚಾಸಾ-7,8 ರವರ ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಸಂಜೆ 5 ರಿಂದ 6 ರವರೆಗೆ ಸ್ಥಳ ಮಹಜರ್ ಜರುಗಿಸಿ, ಸ್ಥಳದಲ್ಲಿ ಚಾಸಾ-7, 8 ರವರ ಸಹಿ ಪಡೆದಿರುತ್ತೇನೆ. ಸ್ಥಳ ಪಂಚನಾಮೆ ನಿಪಿ.2 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ.2(ಡಿ)ಎಂದು ಗುರುತಿಸಲಾಯಿತು. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-41 ರವರಿಗೆ ನೀಡಿರುತ್ತೇನೆ.

<u>ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಪಿ.ಎಲ್.ಕೆ.ವಕೀಲರು ಗೈರುಹಾಜರಿದ್ದು, ಅವರ ಪರ ಶ್ರೀ ಬಿ.ವಿ ವಕೀಲರು ಹಾಜರಿದ್ದು ಶ್ರೀ ಪಿ.ಎಲ್.ಕೆ ವಕೀಲರು ದೂರವಾಣಿ ಕರೆ ಸ್ವೀಕರಿಸುತ್ತಿಲ್ಲ ಎಂದು ನುಡಿದಿದ್ದು, ಸಿನಿಯರ್ ಅವರ ಅನುಮತಿ ಇಲ್ಲದೆ ತಾನು ಪಾಟೀಸವಾಲು ಮಾಡುವುದಿಲ್ಲ ಎಂದು ನುಡಿದಿರುತ್ತಾರೆ. ಆರೋಪಿ ತಾನು ಯಾವುದೇ ಪಾಟೀಸವಾಲು ಮಾಡುವುದಿಲ್ಲ ಎಂದು ನುಡಿದಿರುತ್ತಾರೆ. ಆದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು</u>.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.